ಓಎಸ್. 130/2017 ಪಿಡಬ್ಲ್ಯೂ:1

ದಿನಾಂಕಃ **25.02.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ 3ನೇ ಪ್ರತಿವಾದಿ ಪರ ಶ್ರೀ ಆರ್ ಸಿ ಎಸ್ ವಕೀಲರಿಂದಃ

ನನ್ನ ತಂದೆ ರಾಚಯ್ಯನವರಿಗೆ 3 ಜನ ಸಹೋದರರಿದ್ದು, ಚಾಮಯ್ಯ, ಕರಗಯ್ಯ, ಚಿಕ್ಕರಾಚಯ್ಯ. ಸದರಿ ಚಿಕ್ಕರಾಚಯ್ಯನವರಿಗೆ ಇನ್ನೊಂದು ಹೆಸರು ಇದ್ದ ಬಗ್ಗೆ ನನಗೆ ಮಾಹಿತಿ ಇಲ್ಲ. ಚಿಕ್ಕರಾಚಯ್ಯ ನನ್ನ ಚಿಕ್ಕಪ್ಪ. 1 ನೇ ಪ್ರತಿವಾದಿ ಚಿಕ್ಕರಾಚಯ್ಯನ ಹೆಂಡತಿ ಇದ್ದು, 2 ಮತ್ತು 3 ನೇ ಪ್ರತಿವಾದಿಗಳು ಚಿಕ್ಕರಾಚಯ್ಯನ ಮಕ್ಕಳು. ನನ್ನ ತಂದೆ ರಾಚಯ್ಯನಿಗೆ ನಾವು 7 ಜನ ಗಂಡು ಮಕ್ಕಳು, 3 ಜನ ಹೆಣ್ಣು ಮಕ್ಕಳು. ಚನ್ನಂಜಯ್ಯ, ದೇವರಗುಡ್ಡಯ್ಯ, ಆರ್.ರಂಗಯ್ಯ, ಆರ್. ಮಹದೇವಯ್ಯ, ಅಮಾಸಯ್ಯ, ಬಸವಯ್ಯ, ನಾನು, ನನ್ನ ಸಹೋದರಿಯರು ತಾಯಮ್ಮ ಉಃ ರಾಚಮ್ಮ, ದೊಡ್ಡಮ್ಮ ಮತ್ತು ಪುಟ್ಟನಂಜಮ್ಮ. ಸದರಿಯವರ ಪೈಕಿ ಚನ್ನಂಜಯ್ಯ, ರಂಗಯ್ಯ, ದೇವರಗುಡ್ಡಯ್ಯ ಮತ್ತು ಬಸವಯ್ಯ ಮತ್ತು ನನ್ನ ಮೂರು ಜನ ಸಹೋದರಿಯರು ಮೃತರಾಗಿರುತ್ತಾರೆ. ನನ್ನ ತಂದೆಯ ಆಸ್ತಿಯಲ್ಲಿ ನಾವೆಲ್ಲರೂ ಪಾಲುವಿಭಾಗ ಮಾಡಿಕೊಂಡು ಪ್ರತ್ಯೇಕ ಸ್ವಾಧೀನತೆ ಹೊಂದಿರುತ್ತೇವೆ. ನನ್ನ ಹಿಸ್ಸೆಗೆ ಬಂದ ಎರಡು ಪ್ಲಾಟ್ ಗಳನ್ನು ಮಾರಾಟ ಮಾಡಿರುತ್ತೇನೆ ಎಂದರೆ ಸರಿ.

ದಾವಾ ಸ್ವತ್ತು ನನ್ನ ತಂದೆಯ ಆಸ್ತಿಯಾಗಿತ್ತು. ದಾವಾ ಸ್ವತ್ತು ನನ್ನ ತಂದೆಗೆ ಸರ್ಕಾರದಿಂದ ಬಂದಿತ್ತು. ಆ ಕುರಿತು ನಾನು ಯಾವುದೇ ದಾಖಲೆಗಳನ್ನು ನೋಡಿರುವುದಿಲ್ಲ. ನಮ್ಮ ನಡುವೆ ದಾವಾ ಸ್ವತ್ತಿನಲ್ಲಿ ಇಲ್ಲಿಯವರೆಗೂ ಪಾಲುವಿಭಾಗ ಆಗಿರುವುದಿಲ್ಲ. ನನ್ನ ತಂದೆಯ ಹೆಸರಿನಲ್ಲಿ ಖಾತೆ ಇರುವ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ನನ್ನ ತಂದೆ ಪಾಲುವಿಭಾಗದಲ್ಲಿ ದಾವಾ ಸ್ವತ್ತನ್ನು ನನ್ನ ಹಿಸ್ಸೆಗೆ ನೀಡಿದ್ದರಿಂದ ನಾನು ವಾದಪತ್ರದಲ್ಲಿ ದಾವಾ ಸ್ವತ್ತಿನ ಮಾಲೀಕ ಮತ್ತು ಸ್ವಾಧೀನದಾರ ಎಂದು ಕಾಣಿಸಿರುತ್ತೇನೆ.

ನಿಪಿ 1 ರ ಪಹಣಿ ಪತ್ರಿಕೆಯ ಕಾಲಂ ನಂ.10 ರಲ್ಲಿ ನಾನು ಯಾವ ರೀತಿ ಆಸ್ತಿಯಲ್ಲಿ ಹಕ್ಕು ಅಧಿಕಾರ ಪಡೆದಿರುತ್ತೇನೆ ಎಂದು ನಮೂದು ಆಗಿರುವುದಿಲ್ಲ ಎಂದರೆ ಸರಿ. ಯಾವ ವರ್ಷದಲ್ಲಿ ಸದರಿ ಖಾತೆ ನನ್ನ ಹೆಸರಿನಲ್ಲಿ ವರ್ಗಾವಣೆಯಾಗಿರುತ್ತದೆ ಎಂದು ನಿಪಿ 1 ರಲ್ಲಿ ಕಾಣಿಸಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು 1981-82 ರಲ್ಲಿ ನನ್ನ ಹೆಸರಿಗೆ ಖಾತೆ ವರ್ಗಾವಣೆಯಾಗಿರುತ್ತದೆ ಎಂದು ನುಡಿಯುತ್ತಾರೆ. ಆ ಕುರಿತು ನಾನು ನ್ಯಾಯಾಲಯಕ್ಕೆ ದಾಖಲೆಯನ್ನು ಹಾಜರು ಪಡಿಸಿರುತ್ತೇನೆ.

ನಿಪಿ 4 ರಿಂದ 6 ಪಹಣಿ ಪತ್ರಿಕೆಯಲ್ಲಿ ನನ್ನ ಸಹೋದರ ಮತ್ತು ಸಹೋದರಿಯರ ಹೆಸರಿನಲ್ಲಿ ಜಂಟಿ ಖಾತೆ ಇರುತ್ತದೆ ಎಂದರೆ ಸರಿ. ನಿಪಿ 4 ರಲ್ಲಿ 1 ಎಕರೆ 2 ಗುಂಟೆಗೆ ಸಂಬಂಧಿಸಿ ಉಪವಿಭಾಗಾಧಿಕಾರಿಗಳ ಆದೇಶದಂತೆ ಖಾತೆ ವರ್ಗಾವಣೆಯಾಗಿದ್ದು, ಸದರಿ ಸರ್ವೇ ನಂಬರಿನಲ್ಲಿರುವ 2 ಎಕರೆ 10 ಗುಂಟೆಗೆ ಸಂಬಂಧಿಸಿ ಯಾವುದೇ ವರ್ಗಾವಣೆ ಆದೇಶ ಇಲ್ಲ ಎಂದರೆ ಸರಿ. ಕಾಲಂ 10 ರಲ್ಲಿ ಒಟ್ಟುಗೂಡಿಸು ಎಂದು ನಮೂದಾಗಿರುತ್ತದೆ ಎಂದರೆ ಸರಿ.

ನಿಪಿ 5 ಮತ್ತು 6 ರಲ್ಲಿ ನನ್ನ ಮೃತ ಸಹೋದರ,  ಸಹೋದರಿ ರಾಚಮ್ಮ ಮತ್ತು ಇತರರ ಮಕ್ಕಳ ಹೆಸರುಗಳು ಇವೆ ಎಂದರೆ ಸರಿ. ನನ್ನ ಮತ್ತು ನನ್ನ ಸಹೋದರರ ನಡುವೆ ಪಾಲುಪಾರೀಖತ್ತು ಆಗಿತ್ತು.  ಸದರಿ ದಾಖಲೆಯನ್ನು ಹಾಜರು ಪಡಿಸಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿ ಈ ಹಿಂದೆ ದೇವರಗುಡ್ಡಯ್ಯನವರ ದಾವೆಯಲ್ಲಿ ದಾಖಲೆಯನ್ನು ಹಾಜರು ಪಡಿಸಲು ನಿಮಗೆ ನೀಡಿದ್ದೆನು ಎಂದು ನುಡಿಯುತ್ತಾರೆ.

ಪ್ರಶ್ನೆ: ಯಾವ ದಾವೆಯಲ್ಲಿ ನಾನು ನಿಮ್ಮ ಪರವಾಗಿ ವಕಾಲತ್ತು ಹಾಕಿದ್ದೆನು?

ಉತ್ತರ: ದೇವರಗುಡ್ಡಯ್ಯನು ಸಲ್ಲಿಸಿದ ದಾವೆಯಲ್ಲಿ ನೀವು ರಾಜಿ ಮಾಡಿಸಿರುತ್ತೀರಿ .

ಈ ಮೇಲೆ ಹೇಳಿದಂತೆ ನಿಮ್ಮ ಪರವಾಗಲಿ ನಿಮ್ಮ ಸಹೋದರ ದೇವರಗುಡ್ಡಯ್ಯನ ಪರವಾಗಲಿ ನಾನು ಯಾವುದೇ ದಾವೆಯಲ್ಲಿ ವಕಾಲತ್ತು ಹಾಕಿ ಹಾಜರಾಗಿರುವುದಿಲ್ಲ ಎಂದರೆ ಸರಿಯಲ್ಲ.  ನಾವೆಲ್ಲ ಸಹೋದರರು ಈಗಲೂ ಅನ್ಯೋನ್ಯವಾಗಿರುತ್ತೇವೆ. ಸದರಿಯವರ ಬಳಿ ಇರುವ ಪಾಲುಪರಿಕತ್ತಿನ ಪ್ರತಿಯನ್ನು ಹಾಜರು ಪಡಿಸಲು ನನಗೆ ತೊಂದರೆ ಇಲ್ಲ .

ಈ ಹಂತದಲ್ಲಿ ವಾದಿ ಪರ ವಕೀಲರ ಕೋರಿಕೆ ಮೇರೆಗೆ ಮುಂದುವರಿದ  ಪಾಟೀಸವಾಲಿಗೆ ಸಮಯ ಕೋರಲಾಗಿ ನೀಡಲಾಯಿತು.

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು  ಮಾಡಿಸಲಾಯಿತು.)

ಓ ಹೇ ಕೇ ಸ ಇ ಒ.,

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಚಾಮರಾಜನಗರ.